Regd No M 1299 SATYAVADI Founded 1917

The Oldest Newspaper of Mys

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 159] ಗುರುವಾರ 13—5—48 [ಬಿಡಿ ಪ್ರತಿ 3 ಪೈ

ಪತ್ರಿಕೋದ್ಯೋಗಿಗೆ ಭಾರಿ ಶಿಕ್ಷೆ

ಆಡಳಿತ ಬದಲಾವಣೆ

ನವದೆಹಲಿ — ಹೊರದೇಶ ಪ್ರಚಾರ ಸಂಬಂಧದ ಪೋರ್ಟುಪೋಲಿಯೋ ಸರದಾರ ಪಟೇಲರಿಂದ ಪಂ || ನೆಹರೂರವರಿಗೆ ವರ್ಗಾಯಿಸಲ್ಪಡುವುದು

ಬಹು ಭಾರಿ ಸಮಸ್ಯೆ

ಶ್ರೀನಗರ.... ಕಾಶ್ಮೀರ ಸಮಸ್ಯೆಯು ಪ್ರಪಂಚ ಪ್ರಶ್ನೆಯಾಗಿದೆ ಎಂದಿರುವರು ಪಂ || ನೆಹರು

ರಜಾಕರರ ರ್ಯಾಲಿ

ಹೈದರಾಬಾದು ಮೆ 11— ನೈಜಾಮರ ಜನ್ಮದಿನೋತ್ಸವ ಸಂದರ್ಭದಲಿ ಈ ದಿನ ಒಂದು ಲಕ್ಷ ರಜಾಕರರ ರ್ಯಾಲಿ ನಡೆಯಿತು; ರಜಾಕರರ ನಾಯಕ ಕಾಸಿಂ ರಜ್ವಿಯವರು ಸಲ್ಯೂಟು ತೆಗೆದುಕೊಂಡರು

ಪತ್ರಿಕೋದ್ಯೋಗಿಗೆ ಭಾರಿ ಶಿಕ್ಷೆ

ಔರಂಗಾಬಾದ — ವಿರೋಧವರದಿ ಕಳಿಸಿದನೆಂಬ ಆಪಾದನೆಗೆ ಅಸೋಸಿಯೇಟೆಡ್ ಪ್ರೆಸ್ ಬಾತ್ಮೀದಾರರಾದ ಶ್ರೀ ನಾಗರಾಜರಾಯರಿಗೆ ಸ್ಪೆಷಲ್ ಮ್ಯಾಜಿಸ್ಟ್ರೇಟರು 4 ವರ್ಷ ಸಜ 2 ಸಾವಿರ ರೂ ಜುಲ್ಮಾನೆ ವಿಧಿಸಿದರು

ಹರಿಕಥೆ

ಮೈಸೂರು ಮೆ 13— ಚಾಮರಾಜ ಮೊಹಲ್ಲಾದಲ್ಲಿರು ಶ್ರೀ ಪ್ರಸನ್ನ ಲಕ್ಷ್ಮೀ ಶ್ವವಿ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತೀ ಮಹೋತ್ಸವ ಸಂಬಂಧವಾಗಿ ಈ ದಿವಸ ರಾತ್ರೆ 8 ಗಂಟೆಗೆ ವೇ || ಬ್ರಂ || [illegible]

ಕೋಳಿಗೆ ಮರಣದಂಡನೆ

ಪಶ್ಚಿಮ ಲಂಡನ್ನಿನ ಮೇಜಿಸ್ಟ್ರೇಟು ಕೊರ್ಟಿನಲ್ಲಿ 'ಬ್ಲೇಕ್' ಎಂಬ ಹೆಸರಿನ ಕೋಳಿಗೆ ಮರಣದಂಡನೆ ವಿಧಿಸಲಾಯಿತು, ಅದಾದ ಜನರ ಶಾಂತಿ ಭಂಗ ಮಾಡಿತೆಂಬುದೇ ಅಪರಾಧ! ಒಂದು ದಿನ ಮುಂಜಾನೆ ಈ ಕೋಳಿಯು ಐದು ನಿಮಿಷಗಳಲ್ಲಿ ಇಪ್ಪತ್ತೊಂದು ಸಾರಿ ಕೂಗಿತಂತೆ!

ಸ್ವಾರಸ್ಯ ಪ್ರಸಂಗ

ಗಿರಣಿ ಮಾಲೀಕನೊಬ್ಬನಿಗೆ ಕೆಲಸ ಕೊಡ್ಯಾನೇಜರು ಅಗತ್ಯವಿದ್ದಿತು ಪ್ರಕಟಣೆ ಮಾಡಿದ: ಅನೇಕ ಅರ್ಜಿಗಳು ಬಂದವು; ಬಿ ಎ ಪದವೀಧರನೊಬ್ಬನಿದ್ದನು: ಅವನೊಡನೆ ಸರ್ಟಿಫಿಕೇಟು ತರಬೇಕೆಂದು ಹೇಳಿದಾಗ 'ನನ್ನ ಹೆಸರಿನ ಮುಂದೆ ಬಿ ಎ ಎಂದು ಇದೆ' ಎಂದನು. ಮಾಲೀಕನು ನಿನ್ನ ಪ್ರಾಯವೆಷ್ಟು ಎಂದು ಕೇಳಲು 'ತಮ್ಮಿಂಗಿಂತ ಕಡಮೆ, ತಮ್ಮ ಸಂಪತ್ತಿಗಿಂತ ಹೆಚ್ಚು' ಎಂದನು

ಸೌಹಾರ್ದ ಸ್ಥಾಪಿಸಲು

ಮಾಸ್ಕೊ — ರಷ್ಯಾ ಅಮೇರಿಕಾಗಳಲ್ಲಿನ ಭೇದ ಕಾರಣಗಿಸಿ ಸೌಹಾರ್ದ ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆ

ಭಾರತ ಸಂಗೀತ ಪ್ರಶಂಸೆ

[illegible]ಶದ ಸಂಗೀತವು ಅತಿ [illegible] ಎಂದು ಬ್ರಿಟಿಷ್ [illegible] ಸಾರ್ಜೆಂ

ವಿದೇಶೀ ವಸ್ತುಗಳ

ಮೇಲಿನ ಮೋಹವನ್ನು ದೂರಗೊಳಿಸಿ

(ಜೆ ಸಿ ಕುಮಾರಪ್ಪ)

ಬಯಕೆಗಳನ್ನು ಹೆಚ್ಚಿಸಲು ಸಾಧಾರಣ ಪಾಶ್ಚಾತ್ಯ ನಾಗರೀಕ ಜೀವನವು ಪ್ರೇರೇಪಿಸುತ್ತದೆ: ಮೊದಲು ಸಪ್ಲೈ ಮಾವ ಅದಕ್ಕಾಗಿ ಬಯಕೆಗಳನ್ನುಂಟು ಮಾಡುತ್ತದೆ; ಈ ಕಾರಣದಿಸದ ಅಗತ್ಯವಿಲ್ಲದೆಯೇ ಅನೇಕ ಪದಾರ್ಥಗಳನ್ನು ಕೊಳ್ಳುವೆವು. ಒಂದು ಪಾದರಕ್ಕೆ ಕಾರ್ಖಾನೆಯಿದ್ದು ಡಿಮಾಂಡಿಗಿಂತ ಹೆಚ್ಚು ಪಾದರಕ್ಕೆಗಳನ್ನು ತಯಾರಿಸುವರು ಹೀಗೆಯೇ ಅನೇಕ ಕಾರ್ಖಾನೆಗಳಿರುತ್ತವೆ. ಹೆಚ್ಚಾಗಿ ತಯಾರಿಸಿದಪಾದರಕ್ಕೆಗಳನ್ನು ಮಾರಲು ಮಾರ್ಕಟ್ಟು ದೇಶಾಂತರಗಳಲ್ಲಿಯಾದರೂ ಬೇಕಾಗಿರುತ್ತದೆ. ಉದಾಹರಣೆಗಾಗಿ ಇಟಲಿಯು ಒಂದು ಲಕ್ಷ ಪಾದರಕ್ಕೆಗಳನ್ನು ತಯಾರಿಸಿತೆಂದಂದುಕೊಳ್ಳಿ. ಆ ದೇಶದಲ್ಲಿ ಅವು ಬಿಕರಿಯಾಗದಿದ್ದಲ್ಲಿ ಹೊರದೇಶಗಳಲ್ಲಿ ಎಲ್ಲಿಯಾದರೂ ಅವುಗಳಿಗೆ ಮಾರ್ಕಟ್ಟು ಹುಡುಕಬೇಕು.

ಅಬಿಸೀನಿಯಾದಲ್ಲಿ ಪ್ರಜೆಗಳು ಬರೀ ಕಾಲಿನಲ್ಲಿ ತಿರುಗಾಡುವಿಕೆಯನ್ನು ಇಟಲಿಯು ಗಮನಿಸಿತು, ಅವರ ಪಾದಗಳಿಗೆ ಪಾದರಕ್ಕೆಗಳನ್ನು ಹಾಕಿಸಿ ಅವರಿಗೆ ನಾಗರಿಕತೆಯನ್ನು ಕಲಿಸಬೇಕೆಂದು ಇಟಲಿ ಬಯಸಿತು. ಆ ಬಗೆಯಲ್ಲಿ [illegible]ರ್ಖಕ್ಕೆ ಮಾರ್ಕಟ್ಟು ಲಭಿಸಿ [illegible] ಪ್ರಜೆಗಳ ಜೀವಿತವನ್ನು [illegible]ಂಟ್ರೋಲು ಮಾಡಲು [illegible] ಅವರ ಮೇಲೆ ಏನಿ [illegible]ಲು ಸಾಧ್ಯವಿಸಬೇಕು. [illegible]ಲೇ ಇದು ಸಾಧ್ಯವು.

At Opera
From 14—5—48
King of Mounties
A Republic serial
in 12 thrilling Parts
ಕಿಂಗ್ ಆಫ್ ಮೌಂಟೀಸ್
ಸೀರಿಯಲ್] ಪ್ರತಿದಿನ 3 ಆಟಗಳು
Morning Shows from 14-5-48
THE DOLLY SISTERS

Save the Cow
ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, [illegible] Agrahar M

ಇಂದಿನ ವರ್ತಮಾನ

— ....

ತಿರುವೇಂಡ್ರಂ—50 ಮಂದಿ ಪ್ರಯಾಣೀಕರಿದ್ದ ಒಂದು ಬಸ್ಸಿಗೆ ಬೆಂಕಿ ಬಿದ್ದು 5 ಮಂದಿ ಜೀವಸಹಿತ ಸುಡಲ್ಪಟ್ಟರು, ಅನೇಕರು ಗಾಯಗೊಂಡರು. ಬಸ್ ಸುಟ್ಟು ಬೂದಿಯಾಯಿತು

ಮದರಾಸು .... ಪರೀಕ್ಷೆಯಲ್ಲೂ ತಾನು ನೋಹಿಸಿದ ಹುಡುಗಿ ಪಡೆವೆನೆಂಬ ವಿಷಯದಲ್ಲೂ ವಿಜಯದೊರೆಯದಿರಲು ಶ್ರೀ ಎಂ ಅರ್ ಐಯ್ಯಂಗಾರ್ ಎಂಬಾತನು ನೇಣು ಹಾಕಿಕೊಂಡು ಸತ್ತನು.

ಲಕ್ನೊ.... ಅಯೋಗ್ಯರೂ ಅಸಮರ್ಥರೂ ಲಂಚಕೋರರೂ ಆದ 354 ಮಂದಿ ಪೋಲೀಸು ನೌಕರರು ಕಳೆದ ಎರಡು ವರ್ಷಗಳಿಂದ ಸಂಯುಕ್ತಪ್ರಾಂತ್ಯದಲ್ಲಿ ವಜಾ ಮಾಡಲಾಗಿದೆ

ಲಂಡನ್— ಜರೂಸೆಲಂ ಫ್ರೀನಗರವೆಂದು ರೆಡ್‌ಕ್ರಾಸಿನವರು ಘೋಷಿಸಿ ಕದನದಲ್ಲಿ ತೊಡಗದವರಿಗೆ ಅಲ್ಲಿ ಆಶ್ರಯವಂತೆ!

ಜಮ್ಮು.... ಥಾಳಿಕಾರರನ್ನು ಹಿಮ್ಮೆಟ್ಟಿಸಲಾಯಿತು. ಅವರಲ್ಲಿ 2 ಸಾವಿರ ಮಂದಿ ಸಾವುನೋವಾಗಿಡೆ

ಹುಬ್ಬಳ್ಳಿ—ಇನ್ನು ಕೇವಲ ಎರಡು ವಾರಗಳಲ್ಲಿ ಭಾರತ ಸಂಕಾರಉ ಕೊನೆದಾಗಿ ಹೈದರಾಬಾದು ಸಮಸ್ಯೆ ಬಗೆಹರಿಸುವುದೆಂದು ಸಚಿವ ಗಾಡ್ಗಿಲರು ಹೇಳಿದಾರೆ

ವುಡ್ ಲ್ಯಾಂಡ್ಸ್
7—5—48 ರಿಂದ
ಮಾಡರ್ನ್ ಥಿಯೇಟರ್ಸ್‌ರವರ
ಅತ್ಯಂತ ಸುಂದರ ತಮಿಳು ಚಿತ್ರ
1000 ತಲೈವಾಂಗಿ
ಅಪೂರ್ವ ಚಿಂತಾಮಣಿ
ಪಾತ್ರ — ಪಿ. ಎಸ್. ಗೋವಿಂದ್
ಎಂ. ಆರ್. ಸ್ವಾಮಿನಾಥ್
ಕಾಳಿ ಎನ್. ರತ್ನಂ. ವಿ, ಎನ್. ಜಾನಕಿ
ರಾಜಾಕಾಂತಂ ಮುಂತಾದವರು
Released by Rajlakhmi Pictures
Gandhinagar, Bangalore City

ದಂಡಯಾತ್ರೆಗಳ ಮೂಲ

(ಜೆ ಸಿ ಕುಮಾರಪ್ಪ)

ನಮ್ಮ ದೇಶವನ್ನು ಆಕ್ರಮಿಸಲು ವಿದೇಶೀಯರಿಗೆ ಆಹ್ವಾನವನ್ನು ಪ್ರತ್ಯೇಕವಾಗಿ ಕಳುಹಿಸಬೇಕಾಗಿಲ್ಲ. ವಿದೇಶಿ ವಸ್ತುಗಳನ್ನು ನಾವು ವಿಶೇಷವಾಗಿ ಕೊಳ್ಳುವುದೇ ಸಾಕು. ಅವರ ವಸ್ತುಗಳನ್ನು ಉಪಯೋಗಿಸಿ ಅವರನ್ನು ಬರ ಮಾಡಿಕೊಂಡು ಅವರ ಫಿರಂಗಿಗಳಿಂದಲೂ ಆಟಂ ಬಾಂಬುಗಳಿಂದಲೂ ಅವರನ್ನು ಓಡಿಸಲಾರೆವು. ವಿದೇಶೀಯರು ನಮಗೆ ಬೇಡವೆಂಬ ಇಚ್ಛೆ ಇದ್ದಲ್ಲಿ ಅವರ ಪದಾರ್ಥಗಳ ಡಿಪ್ಯಾಂಡು ತಗ್ಗುವಂತೆ ಮಾಡಿ. ಹೆಣವು ಇರುವ ಸ್ಥಳಕ್ಕೆ ರಣ ಹದ್ದು ಬರದೆ ಏಧಿಯಿಲ್ಲ. ರಣಹದ್ದುಗಳು ಬರಬಾರದೆಂದಿದ್ದಲ್ಲಿ ಶವವನ್ನು ಹೂತಿಡತಕ್ಕದ್ದು. ದಿನಂಪ್ರತಿ ಅವಸರವಾದ ವಸ್ತುಗಳ ವಿದೇಶೀ ಸಪ್ಲೈಯನ್ನು ಸ್ವೀಕರಿಸುವಿಕೆಯೇ ಆ ಹೆಣವು ವಿದೇಶೀ ವ್ಯಾಪಾರವನ್ನು ಹೆಚ್ಚಾಗಿರುವ ಪದಾರ್ಥಗಳಿಗಾಗಿಯೇ ನಡೆಸತಕ್ಕದ್ದು, ಎರಡು ದೇಶಗಳೂ ತಮಗೆ ಹೆಚ್ಚಾಗಿರುವ ಪದಾರ್ಥಗಳನ್ನೇ ಹೊರಕ್ಕೆ ರವಾನೆ ಮಾಡುವಹಾಗಾದಲ್ಲಿ ದೌರ್ಜನ್ಯಕ್ಕೆ ಎಡೆ ಇರುವದಿಲ್ಲ. ಅಂಥಾ ಪರಸ್ಪರ ಸಹಾಯವು ಇಬ್ಬರಿಗೂ ಉಪಯೋಗವೇ. ಎರಡು ದೇಶಗಳ ಅಗತ್ಯಗಳು ಪೂರ್ಣವಾದಲ್ಲಿ ದೌರ್ಜನ್ಯಕ್ಕೆ ಅವಕಾಶವೆಲ್ಲಿರುತ್ತದೆ.

ಸಪ್ಲೈನಲ್ಲಿರುವ ವಸ್ತುಗಳಿಗಾಗಿ ಮಾರ್ಕೆಟ್ಟನ್ನು ಕಲ್ಪಿಸಲು ಪ್ರಕಟಣೆಗಳನ್ನು ಹೊರಡಿಸುವರು. ಇವುಗಳಲ್ಲಿ ನಿಜವು ಅತಿಸ್ವಲ್ಪವಾಗಿರಬಹುದು. ಡಿನಾಂಡಿಗಾಗಿ ಸುಳ್ಳು ಪೊಳ್ಳು ಅತಿಶಯೋಕ್ತಿಗಳು ಅಲಂಕಾರಗಳು ಪ್ರಕಟಣೆಗಳಲ್ಲಿ ಸೇರಿಸಲ್ಪಡುವವು ಇದರಿಂದ ಕೂಡಲೇ ದೌರ್ಜನ್ಯವುಂಟಾಗದಿದ್ದರೂ ಸುಳ್ಳಿನ ಮೇಲೆ ಆಧಾರವಾದಂಥ ಈ ಕಾರ್ಯವು ಹೇಯವಾದದ್ದು

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

'ಪ್ರಬೋಧ' ಪುಟದಿಂದೊಡಗೂಡಿ ಸೋಮವಾರ ಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--13--0



ರಾ ಬೂ ಟ್ ಬು ಕಿ ಂ ಗ್ ಆ ಫೀ

ಐ ಟಿ ಯಾ ಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೂಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು ಇತ್ಯಾದಿ ಕೆಲಸಗಳಿಗೆ ನೆಂವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೂರದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ಮಾಡಲಾಗಿದೆ, ½ ತೋಲಾ, 1 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್ ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

SHAKTI

SUDHA